# ಮೇದಾರ - ಕೊರಚ ಸಮಾಜದವರಿಗೆ ದವಸ-ಧಾನ್ಯ ವಿತರಣೆ

**ಚಿತ್ರದುರ್ಗ - ಏ. 16** - ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ಇಂದು ಮೇದಾರ ಮತ್ತು ಕೊರಚ ಜನಾಂಗದ 280ಕ್ಕು ಹೆಚ್ಚು ಕುಟುಂಬಗಳಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಯಿತು.

ಡಾ. ಶಿವಮೂರ್ತಿ ಮುರುಘಾ ಶರಣರು, ಶ್ರೀ ಇಮ್ಮಡಿ ಬಸವಪ್ರಭು ಕೇತೇಶ್ವರ ಸ್ವಾಮಿಗಳು, ಜಿಲ್ಲಾಧಿಕಾರಿ ಶ್ರೀಮತಿ ವಿನೋತ್‌ಪ್ರಿಯ, ಜಿಲ್ಲಾ ರಕ್ಷಣಾಧಿಕಾರಿ ಶ್ರೀಮತಿ ರಾಧಿಕಾ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಹೊನ್ನಾಂಬ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿಗಳಾದ ಎಂ.ಜಿ.ದೊರೆಸ್ವಾಮಿ, ವಕೀಲರಾದ ಉಮೇಶ್, ವೃತ್ತನಿರೀಕ್ಷಕ ಗಿರೀಶ್, ಕೊರಚ ಸಮಾಜದ ಮುಖಂಡರಾದ ವೈ.ಕುಮಾರ್, ಮೇದಾರ ಸಮಾಜದ ಮುಖಂಡರಾದ ಪ್ರಹ್ಲಾದಪ್ಪ, ಕುಬೇರಪ್ಪ, ರಾಮಣ್ಣ, ಜಗದೀಶ್, ವೆಂಕಟೇಶ್, ಜಿ. ಮಲ್ಲೇಶ್ ಮೊದಲಾದವರು ಉಪಸ್ಥಿತರಿದ್ದರು.





